ದಿನಾಂಕಃ 23.09.2025 ರಂದು ಪಿ.ಡಬ್ಲ್ಯೂ-1ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಸಿಪಿಯು ವಕೀಲರಿಂದಃ

4. ನಾನು ವಾಸವಾಗಿರುವ ಮನೆ ಆಲೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ. ನನ್ನ ಅಜ್ಜಿ ಮರಣ ಹೊಂದಿರುವ ವಿಚಾರಣನ್ನು ಪಟ್ಟಣ ಪಂಚಾಯಿತಿಗೆ ಯಾರು ತಿಳಿಸಿರುತ್ತಾರೆ ಎಂದರೆ ನನ್ನ ಮಾವ ವಿರೂಪಾಕ್ಷ. ದಿ.30.01.2018 ರಂದು ಮರಣ ಹೊಂದಿರುವುದಾಗಿ ತಿಳಿಸಿರುತ್ತಾರೆ. ಮರಣ ಪ್ರಮಾಣ ಪತ್ರವನ್ನು ನನ್ನ ಮಾವ ಪಡೆದುಕೊಂಡಿರುತ್ತಾರೆ. ನನ್ನ ಮಾವ ಪಡೆದುಕೊಂಡಿರುತ್ತಾರೆ ಎಂದು ಈ ದಾವೆಯ ತಕರಾರಿನಲ್ಲಿ ತಿಳಿಸಿರುತ್ತೇನೆ. ಪಟ್ಟಣ ಪಂಚಾಯಿತಿಯಲ್ಲಿ ನೀಡಿರುವ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೀರ ಎಂದರೆ ಇಲ್ಲ. ನನ್ನ ಅಜ್ಜಿ ನನ್ನ ಮನೆಯಲ್ಲೇ ಮರಣ ಹೊಂದಿರುತ್ತಾರೆ ಎಂದು ಪಟ್ಟಣ ಪಂಚಾಯಿತಿಯಿಂದ ದಾಖಲಾತಿ ಪಡೆಯಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನನ್ನ ಅಜ್ಜಿ ಮತದಾನ ಎಲ್ಲಿ ಮಾಡುತ್ತಿದ್ದರು ಎಂದರೆ ಮತದಾನ ಇತ್ತು ಆದರೆ ಮಾಡುತ್ತಿರಲಿಲ್ಲ. ಎಲ್ಲಿ ಮತದಾನ ಇತ್ತು ಎಂದರೆ ಮಳಗಳಲಿ. ನನ್ನ ಅಜ್ಜಿ ನನ್ನ ಮನೆ ಯಾವಾಗ ಸೇರಿಕೊಂಡಿರುತ್ತಾರೆ ಎಂದರೆ 1998-99 ರಿಂದ. ನನ್ನ ಅಜ್ಜಿಯ ಅಧಾರ್ ಕಾರ್ಡ್‌ನಲ್ಲಿ ಅವರ ವಿಳಾಸ ಮಳಗಳಲಿ ಎಂದು ತೋರಿಸಿರುತ್ತಾರೆ. ನನ್ನ ಅಜ್ಜಿಗೆ ವೃದ್ಧಾಪ್ಯ ವೇತನ ಬರುತ್ತಿತ್ತು. ಸದರಿ ವೇತನವನ್ನು ಅಂಚೆ ಕಛೇರಿಯವರು ಹಳೆಯ ಆಲೂರು ವಿಳಾಸಕ್ಕೆ ಒಮ್ಮೆ ತಂದು ಕೊಟ್ಟಿರುತ್ತಾರೆ. ವೇತನಕ್ಕೆ

ಸಂಬಂಧಪಟ್ಟಂತೆ ಯಾವ ವಿಳಾಸ ಕೊಟ್ಟಿರುತ್ತೀರ ಎಂದರೆ ಮಳಗಳಲಿ. ಮಳಗಳಲಿಯಿಂದ ಹಳೆ ಆಲೂರು ಎಷ್ಟು ಅಂತರದಲ್ಲಿರುತ್ತದೆ ಎಂದರೆ 20 ಇರಬಹುದು. ಮಳಗಳಲಿಯಲ್ಲಿ ಅಂಚೆ ಕಛೇರಿ ಇರುತ್ತದೆ. ಮಳಗಳಲಿಯಿಂದ ಹಳೆ ಅಲೂರಿಗೆ ಬಂದು ವೇತನ ನೀಡಿರುತ್ತಾರ ಎಂದರೆ ಹೌದು. ನನ್ನ ಅಜ್ಜಿಗೆ ಹೊಸಕೋಟೆಯ ಕಾರ್ಪೊರೇಷನ್ ಬ್ಯಾಂಕ್ ನಲ್ಲಿ ಖಾತೆ ಇತ್ತು. ಅದಕ್ಕೆ ಸಂಬಂಧಪಟ್ಟ ದಾಖಲಾತಿಯನ್ನು ನನ್ನ ಅಜ್ಜಿ ನನಗೆ ನೀಡಿರುತ್ತಾರ ಎಂದರೆ ಇಲ್ಲ. ನನ್ನ ಅಜ್ಜಿಯನ್ನು ವಾದಿಗೆ ಸೇರಿದ ಸ.ನಂ.61/2 ರ 20 ಗುಂಟೆ ಜಮೀನಿನಲ್ಲಿ ದಫನ್ ಮಾಡಲಾಗಿರುತ್ತದೆ ಎಂದರೆ ಸರಿ. ನನ್ನ ಅಜ್ಜಿಯ ಧಾರ್ಮಿಕ ಆರಾಧನೆಯನ್ನು ಯಾರು ಮಾಡಿರುತ್ತಾರೆ ಎಂದರೆ ನನ್ನ ಮಾವಂದಿರು ಮಾಡಿರುತ್ತಾರೆ. ಅದರಲ್ಲಿ ವಾದಿಯೂ ಸೇರಿರುತ್ತಾರೆ ಎಂದರೆ ಸರಿ. ಸದರಿ ತಿಥಿ ಕಾರ್ಯಕ್ರಮಕ್ಕೆ ನಾನು ಹಣ ನೀಡಿರುತ್ತೇನೆಯೇ ಎಂದರೆ ಇಲ್ಲ.

5. ದಾವಾ ಸ್ವತ್ತಿನಲ್ಲಿ ಕಾಫಿ ತೋಟ ಮಾಡಿರುತ್ತಾರೆ ಎಂದರೆ ಇಲ್ಲ. ದಾವಾ ಸ್ವತ್ತಿನಲ್ಲಿ ಸಾಗುವಳಿ ಯಾರು ಮಾಡುತ್ತಿರುತ್ತಾರೆ ಎಂದರೆ ಯಾರೂ ಇಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಗೊತ್ತಿರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ವಾದಿಯ ಜಮೀನು ಎಂದರೆ ಸರಿ. ವಾದಿ ಪೂರ್ವಕ್ಕೆ ಇರುವ ಅವರ ಸ್ವತ್ತಿನೊಂದಿಗೆ ದಾವಾ ಸ್ವತ್ತನ್ನು ಸೇರಿಸಿ ಕಾಫಿ ತೋಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿ ಸಾಯುವ ಪೂರ್ವದಲ್ಲಿ ದಾವಾ ಸ್ವತ್ತಿನಲ್ಲಿ ಯಾರು ಸಾಗುವಳಿ ಮಾಡುತ್ತಿದ್ದರು ಎಂದರೆ ಮೊಗಪ್ಪರವರು ದನ ಮೇಯಿಸುತ್ತಿದ್ದರು. ದಾವಾ ಸ್ವತ್ತಿನಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಕೆರೆ

ನಿರ್ಮಿಸಿರುತ್ತಾರೆ. ಯಾರು ಕೆರೆ ನಿರ್ಮಿಸಿರುತ್ತಾರೆ ಎಂದರೆ ವಾದಿ ಮಾರಾಟ ಮಾಡಿರುವ ವ್ಯಕ್ತಿ. ಅವರ ಹೆಸರು ಗೊತ್ತಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು
ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹಾ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.